13. Shri Mahaboobsaheb Bepar	House
14. Shri Mahaboobsaheb Bepar	Hotel
15. Shri Mahaboobsaheb Bepar	Wine Shop
16. Shri B.I. Hanchinal	Hotel Meenaxi Bhavan
17. Shri Arjun V. Malagi	Pan Box
18. Shri B.I. Hanchinal	Wine Shop
19. Shri S.R. Shelar	Hotel
20. Shri C.H. Haldarmath	Hotel

ಮುಡುಗುಂಡ ಗುಂಬಳ್ಳಿ ರಸ್ತೆಯ ದುರಸ್ತಿ.

1519 - ಶ್ರೀ ಎಂ.ಸಿದ್ಧಮಾದಯ್ಯ (ಕೊಳ್ಳೆಗಾಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕು ಮುಡುಗುಂಡದಿಂದ ಗೌಹಳ್ಳಿ ಮಾರ್ಗವಾಗಿ ಗುಂಬಳ್ಳಿಯನ್ನು ಸೇರುವ ರಸ್ತೆಯನ್ನು ದುರಸ್ತಿಗೊಳಿಸಬೇಕಾಗಿರುವುದು, ನಿಜವೇ?

ಆ) ಹಾಗಿದ್ದಲ್ಲಿ ಇದರ ದುರಸ್ತಿ ಕಾರ್ಯವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ಹಾಗೂ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಮೈಸೂರು ಜಿಲ್ಲಾ ಪರಿಷತ್ತು ವ್ಯಾಪ್ತಿಯಲ್ಲಿ ಇರುವ 13.8 ಕಿ.ಮಿ ಉದ್ದದ ಈ ಗ್ರಾಮೀಣ ರಸ್ತೆಯ ಕೆಲವು ಭಾಗಗಳನ್ನು ದುರಸ್ತಿ ಮಾಡಬೇಕಾದ ಅವಶ್ಯಕತೆ ಇದೆ.

ಆ) ಈ ಸಾಲಿನಲ್ಲಿ ಈ ರಸ್ತೆಯ ಸುಮಾರು 3 ಕಿ.ಮೀ ನಷ್ಟು ಭಾಗವನ್ನು ಅಭಿವೃದ್ಧಿ ಮಾಡಲಾಗಿದ್ದು ಮುಂದಿನ ಸಾಲಿನಲ್ಲಿ ಲಭ್ಯವಾಗುವ ಅನುದಾನದಲ್ಲಿ ಉಳಿದ ಭಾಗದ ದುರಸ್ಥಿಯನ್ನು ತೆಗೆದುಕೊಳ್ಳಲಾಗುವುದು.

ಯಳಂದೂರು ತಾಲ್ಲೂಕು ಮದ್ದೂರಿನ ಬಳಿ ಸೇತುವೆಯನ್ನು ನಿರ್ಮಿಸುವ ಬಗ್ಗೆ.

1522-ಶ್ರೀ ಎಂ. ಸಿದ್ಧಮಾದಯ್ಯ (ಕೊಳ್ಳೆಗಾಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯಳಂದೂರು ತಾಲ್ಲೂಕು ಮದ್ದೂರಿನಿಂದ ಅಗ್ರಹಾರಕ್ಕೆ ಮಳೆಗಾಲದಲ್ಲಿ ಸುವರ್ಣಾವತಿ ನದಿಯನ್ನು ದಾಟಿ ಹೋಗಲು ಅಲ್ಲಿನ ಜನರಿಗೆ ತುಂಬಾ ಅನಾನುಕೂಲವಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಜನತೆಗೆ ಅನುಕೂಲ ಕಲ್ಪಿಸುವ ಸಲುವಾಗಿ ಮದ್ದೂರಿನ ಬಳಿ ಸುವರ್ಣಾವತಿ ನದಿಗೆ ಸೇತುವೆಯನ್ನು ನಿರ್ಮಿಸಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ಆಯವ್ಯಯದಲ್ಲಿ ದೊರಕುವ ಹಣದ ಲಭ್ಯತೆ ಹಾಗೂ ಅವಶ್ಯಕತೆಯ ಆಧ್ಯತೆಯನ್ನು ಅನುಸರಿಸಿ ಈ ಸೇತುವೆಯನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.